# ಪಾಲಿಕೆಯ ಜಾಹೀರಾತು ವಿಭಾಗದಲ್ಲಿ ಅನುಸರಿಸುವ ಕ್ರಮಗಳು
# (STANDARD PROCEDURE)

- ಜಾಹೀರಾತು ಇಲಾಖೆಯಲ್ಲಿ ಸಿಬ್ಬಂದಿಗಳು ಪಾಲಿಕೆಯ ವ್ಯಾಪ್ತಿಗೆ ಸಂಬಂಧಿಸಿದಂತೆ ಸಾರ್ವಜನಿಕರು ಸ್ವ/ವಾಣಿಜ್ಯ ಜಾಹೀರಾತು ಫಲಕವನ್ನು ಅಳವಡಿಸಿ ಪ್ರದರ್ಶಿಸಲು ಕೋರಿರುವ ಅರ್ಜಿಗಳನ್ನು ಸ್ವೀಕರಿಸಿ 1976 ಕೆ.ಎಂ.ಸಿ ಕಾಯ್ದೆ ಸೆಕ್ಷನ್–135 ಮತ್ತು 2006ರ ಜಾಹೀರಾತು ಬೈಲಾ–3.ಎ.(3) ರಂತೆ ಅರ್ಜಿದಾರರು ಅರ್ಜಿಯನ್ನು ಪಡೆದು ನಿಗಧಿತ ದಾಖಲೆಗಳೊಂದಿಗೆ ಜಾಹೀರಾತು ಇಲಾಖೆಗೆ ಸಲ್ಲಿಸಿದಲ್ಲಿ ಸದರಿ ಅರ್ಜಿಯನ್ನು ಪರಿಶೀಲಿಸಿ ಸ್ಥಳ ತನಿಖೆ ಮಾಡಿ ಸದರಿ ಅರ್ಜಿದಾರರು ಕೋರಿರುವ ಮನವಿಯನ್ನು ಪರಿಗಣಿಸುವ ಕುರಿತು ಮೇಲಾಧಿಕಾರಿಗಳ ಆದೇಶ ಪಡೆದು ಅರ್ಜಿದಾರರಿಗೆ 45 ದಿವಸಗಳೊಳಗಾಗಿ ಹಿಂಬರಹ ಅಥವಾ ಡಿಮ್ಯಾಂಡ್ ನೋಟೀಸನ್ನು ಜಾರಿಗೊಳಿಸಲಾಗುವುದು. ತದನಂತರ ಅರ್ಜಿದಾರರು ಜಾಹೀರಾತು ತೆರಿಗೆಯನ್ನು ಪಾವತಿಸಿದ ಬಳಿಕ ಜಾಹೀರಾತು ಪ್ರದರ್ಶನಕ್ಕೆ ಅನುಮತಿ ನೀಡಲಾಗುವುದು.

- ಜಾಹೀರಾತು ನೊಂದಾವಣೆ ಅರ್ಜಿಯನ್ನು ಸಲ್ಲಿಸಿದಾಗ ಅರ್ಜಿದಾರರ ವಾಸ ಸ್ಥಳದ ದಾಖಲೆ, ಅರ್ಜಿದಾರರ ಛಾಯಾಚಿತ್ರ, ಬ್ಯಾಂಕ್ ಸ್ಟೇಟ್‌ಮೆಂಟ್, ಐ.ಟಿ.ರಿಟರ್ನ್ಸ್, ಪಾನ್ ಕಾರ್ಡ್ ಜೆರಾಕ್ಸ್ ಮತ್ತು ರೂ.50,000/–ಗಳ ಡಿ.ಡಿ.ಯನ್ನು ಮಾನ್ಯ ಆಯುಕ್ತರ ಹೆಸರಿನಲ್ಲಿ ಪಡೆದು ಅರ್ಜಿಯನ್ನು ಪರಿಶೀಲಿಸಿ ಎಲ್ಲಾ ದಾಖಲೆಗಳೊಂದಿಗೆ ನೊಂದಾವಣೆಯನ್ನು 03 (ಮೂರು) ವರ್ಷಗಳ ಅವಧಿಗೆ ಏಜೆನ್ಸಿಯನ್ನು ನೊಂದಾಯಿಸಿಕೊಳ್ಳಲಾಗುತ್ತದೆ.

- ಜಾಹೀರಾತು ಏಜೆನ್ಸಿ ನವೀಕರಣ ಮಾಡಲು ಜಾಹೀರಾತುದಾರರು ಮನವಿ ಪತ್ರದೊಂದಿಗೆ ದಿನಾಂಕ:03.03.2012ರ ನಗರ ಪಾಲಿಕೆ ನಿರ್ಣಯದಂತೆ ರೂ. 15,000/–ಗಳ ಡಿ.ಡಿ.ಯನ್ನು ಮಾನ್ಯ ಆಯುಕ್ತರ ಹೆಸರಿನಲ್ಲಿ ಶುಲ್ಕದೊಂದಿಗೆ ಸಲ್ಲಿಸಿದಾಗ ಪಾಲಿಕೆಯ 8 ವಲಯಗಳಿಂದ ಸದರಿ ಸಂಸ್ಥೆರವರು ಪಾಲಿಕೆಯ ವ್ಯಾಪ್ತಿಯಲ್ಲಿ ಖಾಸಗಿ ಸ್ಥಳಗಳಲ್ಲಿ ಅಳವಡಿಸಿರುವ ಜಾಹೀರಾತು ಫಲಕಗಳಿಂದ ಪಾಲಿಕೆಗೆ ಜಾಹೀರಾತು ಬಾಕಿ ಮೊತ್ತ, ನ್ಯಾಯಾಲಯದಲ್ಲಿ ದಾವೆ ಹೂಡಿರುವ ಬಗ್ಗೆ, ಪಾಲಿಕೆಯ ಅನುಮತಿ ಪಡೆಯದೇ ಅನಧಿಕೃತವಾಗಿ ಜಾಹೀರಾತು ಫಲಕಗಳನ್ನು ಅಳವಡಿಸಿರುವ ಕುರಿತು ವರದಿಯನ್ನು ಪಡೆದು ಪರಿಶೀಲಿಸಿ ನೊಂದಾವಣೆ ನವೀಕರಣ ಪತ್ರವನ್ನು 03 (ಮೂರು) ವರ್ಷದ ಅವಧಿಗೆ ನವೀಕರಿಸಲಾಗುವುದು.

- <u>ಟೆಂಡರ್ ಪ್ರಕ್ರಿಯೆ:</u> ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ಥಳಗಳಲ್ಲಿ ಜಾಹೀರಾತುಗಳನ್ನು ಪ್ರದರ್ಶಿಸಲು ಟೆಂಡರ್‌ಗಳನ್ನು ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿಸಲಾಗುತ್ತದೆ. ಸದರಿ ಟೆಂಡರ್‌ಗೆ ಒಂದು ತಿಂಗಳ ಕಾಲಾವಕಾಶ ನೀಡಲಾಗುತ್ತದೆ. ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರು ತಾಂತ್ರಿಕ ಹಾಗೂ ಆರ್ಥಿಕ ಬಿಡ್ಡಿನಲ್ಲಿ ಅರ್ಹರಾದ ಗುತ್ತಿಗೆದಾರರಿಗೆ ಟೆಂಡರ್‌ನ್ನು ವಹಿಸಿಕೊಡಲಾಗುವುದು. ಯಶಸ್ವಿಯಾದ ಗುತ್ತಿಗೆದಾರರು ಪಾಲಿಕೆಯೊಂದಿಗೆ ಈ ಸಂಬಂಧ ಕರಾರು ಒಪ್ಪಂದವನ್ನು ಮಾಡಿಕೊಳ್ಳಬೇಕಾಗಿರುತ್ತದೆ. ತದ ನಂತರ ಸದರಿ ಗುತ್ತಿಗೆದಾರರು ಪಾಲಿಕೆಗೆ ಪಾವತಿಸಬೇಕಾದ ನೆಲಬಾಡಿಗೆ, ಜಾಹೀರಾತು ತೆರಿಗೆ, ಮತ್ತು ಸೇವಾ ತೆರಿಗೆಯನ್ನು ಪಾವತಿಸಲು ಬೇಡಿಕೆ ಪತ್ರವನ್ನು ಜಾರಿಗೊಳಿಸಲಾಗುವುದು.

(signature)
ಸಹಾಯಕ ಆಯುಕ್ತರು(ಜಾಹೀರಾತು)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.